**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ: ಸಿ7(8)ಪ್ರಾಶಿಅ/ಆರ್.ಟಿ.ಇ/ದಾಖಲಾತಿ/473/2015-16 ದಿನಾಂಕ:04-05-2016

# ಸುತ್ತೋಲೆ

ವಿಷಯ: 2016-17ನೇ ಸಾಲಿನಲ್ಲಿ ಶಿಕ್ಷಣ ಹಕ್ಕು ಕಾಯಿದೆಯಡಿ ಪ್ರವೇಶ ಪ್ರಕ್ರಿಯೆ ಕುರಿತು.

******

2016-17 ನೇ ಸಾಲಿನಲ್ಲಿ ಆರ್.ಟಿ.ಇ ಕೋಟಾದಡಿ ಪ್ರವೇಶ ಕೋರಿ ಆನ್‌ಲೈನ್ ಮೂಲಕ ಒಟ್ಟು 2,74,628 ಅರ್ಜಿಗಳನ್ನು ಸ್ವೀಕರಿಸಲಾಗಿತ್ತು. ಅವುಗಳ ಪೈಕಿ 1,36,399 ಅರ್ಜಿಗಳನ್ನು ಡೂಪ್ಲಿಕೇಟ್ ಅಥವಾ ಅಪೂರ್ಣ ಮಾಹಿತಿಯ ಕಾರಣ ಅರ್ಹತಾ ಪಟ್ಟಿಯಿಂದ ಕೈಬಿಟ್ಟು, 1,38,229 ಅರ್ಜಿಗಳನ್ನು ಮಾತ್ರ ಲಾಟರಿ ಪ್ರಕ್ರಿಯೆಗೆ ಪರಿಗಣಿಸಲಾಗಿತ್ತು.

ವಿವಿಧ ಕಾರಣಗಳಿಂದ ತಿರಸ್ಕರಿಸಲ್ಪಟ್ಟ ಅರ್ಜಿಗಳಲ್ಲಿನ ಲೋಪದೋಷಗಳನ್ನು ಸರಿಪಡಿಸಲು ಪೋಷಕರಿಗೆ ಎಸ್.ಎಂ.ಎಸ್. ಮೂಲಕ ಮಾಹಿತಿಯನ್ನು ಹಲವು ಬಾರಿ ನೀಡಲಾಗಿದ್ದರೂ ಸಹ ಬಹುತೇಕ ಪೋಷಕರು ತಂತ್ರಾಂಶದ ಮೂಲಕ ಲೋಪದೋಷಗಳನ್ನು ಸರಿಪಡಿಸಿರುವುದಿಲ್ಲ.

ಪೋಷಕರ ಕೋರಿಕೆಯ ಮೇರೆಗೆ ಅರ್ಜಿಯಲ್ಲಿನ ಲೋಪದೋಷಗಳನ್ನು ಸರಿಪಡಿಸಲು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಜವಾಬ್ದಾರಿ ನೀಡಿ ದಿನಾಂಕ: 30.04.2016 ರವರೆಗೆ ಕಾಲಾವಕಾಶ ನೀಡಲಾಗಿತ್ತು.

ದಿನಾಂಕ: 23-4-2016 ರಂದು ಪ್ರಕಟಿಸಲಾದ ಅರ್ಹತಾ ಪಟ್ಟಿಗೆ ಹಲವಾರು ಆಕ್ಷೇಪಣೆಗಳು ಸ್ವೀಕರಿಸಲಾಗಿತ್ತು. ಈ ಆಕ್ಷೇಪಣೆಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಪರಿಶೀಲಿಸಿ ಅವುಗಳ ಪೈಕಿ ನೈಜ್ಯ ಅಭ್ಯರ್ಥಿಗಳನ್ನು ಅರ್ಹತಾ ಪಟ್ಟಿಗೆ ಪುನಃ ತರಲಾಗಿದೆ. ಅದಲ್ಲದೆ ಆಕ್ಷೇಪಣಾ ಅರ್ಜಿಗಳನ್ನು ತಿರಸ್ಕರಿಸಲು ಕಾರಣವಾದ ತಾಂತ್ರಿಕ ಲೋಪಗಳನ್ನು ಮರುಪರಿಶೀಲಿಸಿ ಆಕ್ಷೇಪಣೆ ನೀಡದೆ ಇದ್ದರೂ ಸಹ, ದಿನಾಂಕ: 23-4-2016ರಂದು ತಿರಸ್ಕರಿಸಲ್ಪಟ್ಟ ಎಲ್ಲಾ ಅರ್ಜಿಗಳನ್ನು ಮರು ಪರಿಶೀಲನೆಗೆ ಒಳಪಡಿಸಲಾಯಿತು. ಅದರ ಪರಿಣಾಮವಾಗಿ ಇಂದು ಪ್ರಕಟಿಸಲ್ಪಡುವಂತಹ ಅರ್ಹತಾ ಪಟ್ಟಿಯಲ್ಲಿ ಸುಮಾರು 50,000 ಅಭ್ಯರ್ಥಿಗಳನ್ನು, ಹಿಂದೆ ಇದ್ದಂತಹ 1,38,229 ಅಭ್ಯರ್ಥಿಗಳ ಪಟ್ಟಿಗೆ ಸೇರಿಸಿ ಒಟ್ಟಾರೆ 1,88,077 ಅರ್ಜಿಗಳನ್ನು ಲಾಟರಿ ಪ್ರಕ್ರಿಯೆಗೆ ಅರ್ಹ ಅರ್ಜಿಗಳೆಂದು ಪರಿಗಣಿಸಲಾಗಿದೆ.

ಈ ರೀತಿ ಸಾಕಷ್ಟು, ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಇಲಾಖಾ ವತಿಯಿಂದ ಕೈಗೊಂಡಿದ್ದು, ಯಾವೊಬ್ಬ ಅಭ್ಯರ್ಥಿಯೂ ಕೂಡ ತಮ್ಮ ಹಕ್ಕನ್ನು ತಾಂತ್ರಿಕ ಕಾರಣದಿಂದ ಕಳೆದುಕೊಳ್ಳಬಾರದೆಂಬ ಸದುದ್ದೇಶದಿಂದ ಈ ಹಿಂದೆ ಪ್ರಕಟಿಸಲಾಗಿದ್ದ ಪಟ್ಟಿಯ ಜೊತೆಗೆ ಈಗ ಪರಿಷ್ಕರಿಸಿದ ಅರ್ಹತಾ ಪಟ್ಟಿಯನ್ನು ಎರಡನೇ ಅರ್ಹತಾ ಪಟ್ಟಿಯೆಂದು ಪರಿಗಣಿಸಿ ಈ ಅರ್ಹತಾ ಪಟ್ಟಿಗೆ ಆಕ್ಷೇಪಣೆ ಇದ್ದಲ್ಲಿ ಪೋಷಕರು ಆಕ್ಷೇಪಣೆ ಸಲ್ಲಿಸಲು ಒಂದು ದಿನದ ಕಾಲಾವಕಾಶವನ್ನು ನೀಡಲಾಗಿದೆ.